## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರು, ಜಿಲ್ಲಾ ಪಂಚಾಯಿತಿ, ಬೀದರ್ ಇವರ ಹಿಂದಿನ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ: 1)ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರ್ ಇವರ ಪತ್ರ ಸಂಖ್ಯೆ:ಜಿಪಂಬೀ/ಸಿಬ್ಬಂದಿ-1/ಸಿಆರ್-53/2017-18/9862 ದಿನಾಂಕ 13.7.2017.

2)ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಎ 2012 ದಿನಾಂಕ 08.09.2016.

3)ಸರ್ಕಾರದ ಆದೇಶ ಸಂಖ್ಯೆ: ಆಇ 4 ಎಸ್‌ಆರ್‌ಎ 2016 ದಿನಾಂಕ 10.4.2017.

---

**ಪ್ರಸ್ತಾವನೆ:**

ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರು ಇವರು ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ತದನಂತರ ಅವರ ಸೇವೆಯನ್ನು ದಿನಾಂಕ 01.05.1991 ರಂದು ಸಕ್ರಮಾತಿಗೊಂಡಿದ್ದು, ದಿನಾಂಕ 30.12.2013 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. ಸದರಿಯವರು ಅವರಿಗೆ ಕೆ.ಸಿ.ಎಸ್.ಆರ್. ನಿಯಮ 247-ಎ ರಡಿ ಹಿಂದಿನ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತೆ ಕೋರಿದ್ದ ಮೇರೆಗೆ, ಮೇಲೆ (1)ರಲ್ಲಿ ಓದಲಾದ ದಿನಾಂಕ 13.07.2017ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರಾ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ 08.09.2016ರ ಆದೇಶದಲ್ಲಿ ಆರ್ಥಿಕ ಇಲಾಖೆಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎಕ್ಕೆ ಸಮಗ್ರವಾಗಿ ತಿದ್ದುಪಡಿ ತರಲಾಗಿದ್ದು, ಸದರಿ ತಿದ್ದುಪಡಿ ನಿಯಮಗಳು ದಿನಾಂಕ 15.2.2012 ರಿಂದ ಜಾರಿಗೆ ಬಂದಿವೆ. ಸದರಿ ನಿಯಮದ ಉಪ ನಿಯಮ (6) (v) ರನ್ವಯ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸಿದ್ದು, ನಂತರ ಯಾರ ಸೇವೆಗಳನ್ನು ಕ್ರಮಬದ್ಧಗೊಳಿಸಲಾಗಿರುವುದೋ ಅಂತಹ ನೌಕರರು ಮತ್ತು ಉಪ ನಿಯಮ (6) (vi) ರನ್ವಯ ಯಾವ ಮಿತವೇತನ ಪದವೀಧರರ ಸೇವೆಯನ್ನು ತರುವಾಯದಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ ಆ ಮಿತವೇತನ ಪದವೀಧರರು ದಿನಾಂಕ:15.02.2012 ಮತ್ತು ತದನಂತರದಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದಲ್ಲಿ ಅಂತಹ ನೌಕರರು ಈ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ. ದಿನಾಂಕ 14.02.2012ರ ಪೂರ್ವದಲ್ಲಿ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿಯೂ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ನಿಯಮ 247-ಎ ರಲ್ಲಿನ ಅವಕಾಶಗಳನ್ವಯ ಹೆಚ್ಚುವರಿ ಸೇವೆ ಸೇರ್ಪಡೆ ಕುರಿತ ಪ್ರಕರಣಗಳನ್ನು ಆಡಳಿತ ಇಲಾಖೆಯ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ / ದಾಖಲೆಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಸೂಕ್ತ ಆದೇಶ ಹೊರಡಿಸಲು ಆಡಳಿತ ಇಲಾಖಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಗಳ ಮತ್ತು ಇಲಾಖಾ ಕಾರ್ಯದರ್ಶಿ ಯವರಿಗೆ ಅಧಿಕಾರ ಪ್ರತ್ಯಾಯೋಜಿಸಿದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 10.04.2017ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ರ ಅವಕಾಶಗಳನ್ವಯ ಈ ನಿಯಮಗಳ

ಸೌಲಭ್ಯವು ನೇರ ನೇಮಕಾತಿ ಹೊಂದಿದ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತಿದ್ದು, ದಿನಗೂಲಿ / ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಅವರ ಸೇವೆಯನ್ನು ಕ್ರಮಬದ್ಧಗೊಳಿಸಲಾದ ನೌಕರರಿಗೆ ಅನ್ವಯವಾಗುವುದಿಲ್ಲವೆಂಬ ನಿಬಂಧನೆ ಇದ್ದರೂ ನ್ಯಾಯಾಲಯಗಳ ತೀರ್ಪಿನ ಹಿನ್ನೆಲೆಯಲ್ಲಿ ಸದರಿ ನಿಯಮದ ಉಪನಿಯಮ 6 ರ ಅವಕಾಶದಂತೆ ಈ ವರ್ಗದ ನೌಕರರಿಗೂ ಸಹ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಯಾಗಿ ಪರಿಗಣಿಸಲು ಅವಕಾಶ ಮಾಡಿಕೊಡಲಾಗಿದೆ. ಆದ್ದರಿಂದ ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರು, ಜಿಲ್ಲಾ ಪಂಚಾಯಿತಿ, ಬೀದರ್ ದಿನಾಂಕ 01.05.1991 ರಂದು ಸೇವಾ ಸಕ್ರಮಾತಿಗೊಂಡು ದಿನಾಂಕ 31.12.2013 ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247–ಎ ರಲ್ಲಿನ ಅವಕಾಶಗಳನ್ವಯ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕಾಗಿ ಅಧಿಕ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅನುಮತಿಸಬಹುದಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 269 ಕೆಎಸ್‌ಎಸ್ 2017 ಬೆಂಗಳೂರು ದಿನಾಂಕ:22.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರು ಇವರು ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯನ್ನು ಕ್ರಮಬದ್ಧಗೊಳಿಸಲಾದ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247–ಎ ರ ಅವಕಾಶಗಳನ್ವಯ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕಾಗಿ ಅಧಿಕ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಅನುಮತಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಎ 2012 ದಿನಾಂಕ 08.09.2016 ಹಾಗೂ ದಿನಾಂಕ 10.4.2017ರ ಸರ್ಕಾರದ ಆದೇಶ ಸಂಖ್ಯೆ: ಆಇ 4 ಎಸ್‌ಆರ್‌ಎ 2016 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/8/17

(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ (**ಸದರಿ ನೌಕರರ ಸೇವಾ ಪುಸ್ತಕ ಹಾಗೂ ಮತ್ತಿತರ ದಾಖಲೆಗಳೊಂದಿಗೆ – "ನೋಂದಾಯಿತ ಅಂಚೆ"– ಸ್ವೀಕೃತಿ ಸಮೇತ**) ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರವರ ನಿವೃತ್ತಿ ವೇತನ ಪುನರ್ ನಿಗದಿಪಡಿಸಲು ಮಹಾಲೇಖಪಾಲರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.
3) ಶ್ರೀ ಬಿರಾದಾರ ಮಾಣಿಕ, ನಿವೃತ್ತ ಅಧೀಕ್ಷಕರು, ಜಿಲ್ಲಾ ಪಂಚಾಯಿತಿ, ಬೀದರ್ ಜಿಲ್ಲೆ
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪತ್ರಾಂಕಿತ ಆಪ್ತ ಸಹಾಯಕರು.
5) ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ–2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು
6) ಶಾಖಾ ರಕ್ಷಕ ಕಡತ: ಹೆಚ್ಚಿನ ಪ್ರತಿ.